MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.47 ENGLISH DAILY Subscription Yearly - Rs. - SATURDAY 12-2-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಫೆಬ್ರವರಿ 1–10 ರ ತನಕ ಮಲೇಶ್ಯಯನ್ ಪಾಮೆಣ್ಣೆ ರಫ್ತು 5 ಶೇಕಡಾ ಇಳಿಕೆ

ಕಾರ್ಗೋ ಸರ್ವೇಯರ್ SGS ITS ಪ್ರಕಾರ ಫೆಬ್ರವರಿ 1–10 ರ ತನಕ ಮಲೇಶ್ಯಯನ್ ಪಾಮೆಣ್ಣೆ ರಫ್ತು 5 ರಿಂದ 6.5 ಶೇಕಡಾ ಕುಸಿತ ಕಂಡಿದೆ. ( ಹಿಂದಿನ ತಿಂಗಳ ಅವಧಿಗೆ ಹೋಲಿಸಿದಾಗ) ಇದೇ ಸಂದರ್ಭ ಮಲೇಶ್ಯಯನ್ ಪಾಮೆಣ್ಣೆ ಇನ್ ವೆಂಟರಿ ದಾಸ್ತಾನು ಹಿಂದಿನ 6 ತಿಂಗಳ ಕನಿಷ್ಠ ಮಟ್ಟಕ್ಕಿಳಿದಿದೆಯೆನ್ನಲಾಗಿದೆ. ಹಾಗೆಯೇ ಉತ್ಪಾದನೆ ಹಾಗೂ ಆಮದು ಇಳಿಕೆಯಾಗಿದೆಯೆನ್ನಲಾಗಿದೆ. ಜನವರಿ 2022 ರ ಮಲೇಶ್ಯಯನ್ ಕಚ್ಚಾ ಪಾಮೆಣ್ಣೆ ದಾಸ್ತಾನು 7.7 ಶೇಕಡಾ ಇಳಿಕೆಯಾಗಿ ಡಿಸೆಂಬರ್2021 ರಲ್ಲಿದ್ದ 852,339 ಟನ್ ಗಳಿಂದ ಜನವರಿ 2022 ರಲ್ಲಿ 786,828 ಟನ್ ಇಳಿಕೆಯಾಗಿದೆಯೆನ್ನಲಾಗಿದೆ. ಮಲೇಶ್ಯಯನ್ ಪಾಮೆಣ್ಣೆ ಇನ್ ವೆಂಟರಿ ದಾಸ್ತಾನು 309 ಶೇಕಡಾ ಕುಸಿತವಾಗಿ 1.55 ಮಿಲಿಯನ್ ಟನ್ ಗಳಿಗೆ ಕುಸಿದಿದೆಯೆನ್ನಲಾಗಿದೆ. ಉತ್ಪಾದನೆ ಡಿಸೆಂಬರ್ 2021 ರಲ್ಲಿದ್ದ 1.45 ಮಿಲಿಯನ್ ಟನ್ ಗಳಿಂದ 13.5 ಶೇಕಡಾ ಕುಸಿತವಾಗಿ ಜನವರಿ 2022 ರಲ್ಲಿ 1.25 ಮಿಲಿಯನ್ ಟನ್ ಗಳಾಗಿದೆಯೆನ್ನಲಾಗಿದೆ. 2022 ಜನವರಿಯ ಮಲೇಶ್ಯಯನ್ ಪಾಮೆಣ್ಣೆ ರಫ್ತು 18.7 ಶೇಕಡಾ ಇಳಿಕೆಯಾಗಿ ಡಿಸೆಂಬರ್ 2021 ರಲ್ಲಿದ್ದ 1.42 ಟನ್ ಗಳಿಂದ ಜನವರಿ 2022 ರಲ್ಲಿ 1.16 ಮಿಲಿಯನ್ ಟನ್ ಗಳಾಗಿದೆ.